


ಸ್ಟ್ರಾಸ್‌ಬರ್ಗ್‌ನಲ್ಲಿರುವ ರೀಚ್ ವಿಶ್ವವಿದ್ಯಾಲಯದ ವೈದ್ಯಕೀಯ ಸಂಸ್ಥೆಯ ವಿಭಾಗದಲ್ಲಿರುವ ಆಗಸ್ಟ್ ಹಿರ್ಟ್‌ನ ಪ್ರಯೋಗ ಶಾಲೆಯ ಮುಂದೆ ಆತನ ವಿಕೃತ ಅಧ್ಯಯನ ಯೋಜನೆಯನ್ನು ನೆನಪಿಸುವ ಫಲಕ

ವೈಯುಕ್ತಿಕ ಆಸಕ್ತಿಗೂ ಬಹುಶಃ ಬಲವಾದ ಕೊಂಡಿ ಇರುವುದು ಎಂದು ನನ್ನ ಅನಿಸಿಕೆ.

★★★

ಕೊನೆಗೆ ಬೆಗರ್ ಆರಿಸಿದ 87 ಜನರನ್ನು ಇತರೆ ಯೆಹೂದಿಗಳಿಂದ ಬೇರ್ಪಡಿಸಿ ಪ್ರತಿಯೊಬ್ಬರಿಗೂ ಒಂದು ಸಂಖ್ಯೆಯನ್ನು ನೀಡಲಾಗುತ್ತದೆ. ಆ ದಿನಗಳಲ್ಲಿ ಸಾಕಷ್ಟು ಅವಾಂತರ ಮಾಡಿದ್ದ ಟೈಫಸ್ ಎಂಬ ಕಾಯಿಲೆ ಅವರನ್ನು ತಟ್ಟದಂತೆ ಲಸಿಕೆಯನ್ನೂ ಹಾಕಲಾಗುತ್ತದೆ. ಲಸಿಕೆ ಹಾಕುವ ಸಮಯದಲ್ಲಿ ಅವರ ಪೂರ್ವೇತಿಹಾಸವನ್ನು ರಿಜಿಸ್ಟರ್‌ಗಳಲ್ಲಿ ಬರೆದಿಡಲಾಗುತ್ತದೆ, ಅವರವರ ಸಂಖ್ಯೆಯ ಜೊತೆ. ಈ ಮೂಲದಿಂದಲೇ ಯುದ್ಧೋತ್ತರದಲ್ಲಿ ಆ ನತದೃಷ್ಟರ ಕಳೇಬರಗಳ ಸಂಖ್ಯೆಗಳನ್ನು ಹಿಡಿದು ಅವರ ಮೂಲವನ್ನು ಹುಡುಕಿ ಹೊರಟವರಿಗೆ ಸಂಪೂರ್ಣ ವಿವರಗಳು ದೊರೆಯುವುದು. ಹಾಗೆ ಲಸಿಕೆ ಹಾಕಲಾದ ಯೆಹೂದಿಗಳನ್ನು ಇತರರಿಂದ ಬೇರ್ಪಡಿಸಿ, ಒಂದು ಕೋಣೆಯಲ್ಲಿಟ್ಟು ಅವರಿಗೆ ಆರೋಗ್ಯಕರ ಆಹಾರವನ್ನು ನೀಡಲಾಗುತ್ತದೆ. ಇದುವರೆಗೆ ನಿರಾಶ್ರಿತರ ಶಿಬಿರಗಳ ಕಷ್ಟಗಳಲ್ಲಿ ಸೊರಗಿದ್ದ ಅವರ ದೇಹಗಳು ತಮ್ಮ ಯಥಾಸ್ಥಿತಿಗೆ ಬಂದು ನಿಜವಾದ ಯೆಹೂದಿ ರೂಪ ಪಡೆಯಲಿ ಎಂಬ ಉದ್ದೇಶದಿಂದ. ಅಲ್ಲದೆ ಅಂದಿನಿಂದ ಅವರೆಲ್ಲರನ್ನೂ ಕಷ್ಟಕರವಾದ ಕೆಲಸಗಳಿಂದ ದೂರವಿಟ್ಟು ವಿಶ್ರಾಂತಿ ನೀಡಲಾಗುತ್ತದೆ ಕೂಡ. ಅದೇ ಶಿಬಿರದಲ್ಲಿದ್ದ ಇತರೆ ಯೆಹೂದಿಗಳು ಕೆಲವರು ಈ ಗುಂಪನ್ನು ಅಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿರುವುದನ್ನು ಗಮನಿಸಿ, ಅವರ 'ಅದೃಷ್ಟ'ಕ್ಕೆ ಹಲುಬಿ, ತಮ್ಮನ್ನೂ ಆ ಗುಂಪಿಗೆ ಸೇರಿಸಿ ಎಂದು ಅಲ್ಲಿನ ಗಾರ್ಡ್‌ಗಳಿಗೆ ದಂಬಾಲು ಬಿದ್ದು ಬೇಡಿಕೊಳ್ಳುತ್ತಾರೆ. ಆದರೆ ಇಡೀ ರಹಸ್ಯ ಯೋಜನೆಯ ಬಗ್ಗೆ ತಿಳಿದಿದ್ದ ಜರ್ಮನ್ ಗಾರ್ಡಗಳು 'ಆ ಯೆಹೂದಿಗಳ ನಿಜವಾದ ಭವಿಷ್ಯ ತಿಳಿದರೆ ನೀವಿರುವ ಸ್ಥಿತಿಯೆ ಸ್ವರ್ಗ ಎನ್ನಬೇಕಾಗುತ್ತದೆ' ಎಂದಾಗ, ಎಲ್ಲರೂ ಹಾಗೆ ಯಾಚಿಸುವುದನ್ನೂ ಕೈ ಬಿಡುತ್ತಾರೆ.